(254) Tel P:1-2

Regn No BG 155

Sri
" SATYAVADI "
— DAILY —
MYSORE 4
45 th Year

Protect the cow

ಸತ್ಯವಾದಿ

ಸ್ಥಾಪಕರು— ಅರಮನೆ ಸಿಂಹೇಂದ್ರರ್ ಎಂ. ಎ ಮುದ್ದುರಂಗಯ್ಯರು [ವಿವರ ಪ್ರತಿ 3 ಪೈ

1—4—1961

ದಿನಪತ್ರಿಕೆಗೆ 6 ಆಣೆ

ವಿಶ್ವಸಂಸ್ಥೆಯಲ್ಲಿ ಚೀನಾಕ್ಕೆ ಸ್ಥಾನದ ಪ್ರಯತ್ನ

15-4-61

ಬಿಡುಗಡೆ

ಬೊಂಬಾಯಿ 13— ಗೋವಾದಲ್ಲಿ ಪೋರ್ಚುಗೀಸರಿಂದ ಬಂಧನದಲ್ಲಿದ್ದ ಗೋವಾ ಕಾಂಗ್ರೆಸ್ಸಿನ ಮಾಜಿ ಕಾರ್ಯದರ್ಶಿ ಥಾಮಸ್ ಡಯಾಸರು ಬಿಡುಗಡೆ ಮಾಡಲ್ಪಟ್ಟರೆಂದು ತಿಳಿಯಬಂದಿದೆ.

★

ಇಬ್ಬರ ಬಂಧನ

ಬೆಂಗಳೂರು 14— ಭಾನುವಾರ ಮಧ್ಯರಾತ್ರಿ ನಂತರ ಲೆಜಿಸ್ಲೇಟರ್‌ರ ಭವನದಲ್ಲಿ ನಡೆದ ಹೇಯ ಕೃತ್ಯ ಸಂಬಂಧದಲ್ಲಿ ಒಬ್ಬಳು ಮತ್ತು ಭವನದ ಆಳು ಚಿಕ್ಕತಿಮ್ಮಯ್ಯ ಎಂಬುವನನ್ನೂ ಪೋಲೀಸರು ಬಂಧಿಸಿರುವರು

★

ಪ.ಹೃ ಕೃತ್ಯ ವಿನಿರ್ಮಾಮಕ್ಕೆ

ಬೆಂಗಳೂರು— ವಿಧಾನ ಸೌದದಲ್ಲಿ ಅಡಿಷ್ಟೀಕಮಿಷನರುಗಳು, ಪೋಲೀಸು ಸೂಪರಿಂಟೆಂಡೆಂಟರು ಮುಂತಾದವರ ಸಮ್ಮೇಳನದಲ್ಲಿ ಗೃಹಮಂತ್ರಿ ಶ್ರೀ ಚೆನ್ನ ಒಪ್ಪನವರ ಮಾತನಾಡುತ್ತಾ— ಸ್ಥಳದಲ್ಲಿಯೇ ಮೊಖದ್ದಮೆಗಳನ್ನು ಮುಗಿಸಲು ಸಂಚಾರಿ ನ್ಯಾಯಸ್ಥಾನಗಳನ್ನು ಸ್ಥಾಪಿಸುವ ಯೋಜನೆಯನ್ನು ಸಂಕಾರಾಪರ್ಯಾಲೋಚಿಸುತ್ತಿದೆ ಎಂದು ಹೇಳಿದರು — ಎಲ್ಲ ಸಾಕ್ಷ್ಯ ಮತ್ತು ಸಲಕರಣೆಗಳನ್ನು ಒದಗಿಸುವುದಾಗಿಯೂ ಮುಖ್ಯಮಂತ್ರಿಯವರೆ, ತೃಪ್ತಿಕರ ಮತ್ತಿತರ ಶೆಟ್ಟಿ ನಡತೆಯವರನ್ನು ಮಚ್ಚಹಾಕಬೇಕೆಂದು ತಿಳಿಸಿದರು.

ಸಾಳೆಯ ಹಂಚಾಂಗ

ಶ್ರೀಶೈಲ ಮಹಾವಿದ್ಯಾಪೀಠಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಶ್ಯಾಸ್ತ್ರಿ ಜೋಯಿಸರಿಂದ
ಸಾ ಭಾಮುವಾರ ಪಾಶ್ಯ ಅಶ್ವಿನಿ (ದಿ-7)

ಚೀನಾದ ಗಣಿ

ನವದೆಹಲಿ 14—ಮೈಸೂರು ರಾಜ್ಯದಲ್ಲಿ ಹೆಚ್ಚು ಚಿನ್ನದ ಗಣಿ ಪತ್ತೇಮಾಡಲು ಸರ್ಕಾರ ಭೂಗರ್ಭ ಶೋಧನೆ ನಡೆಸಬೇಕೆಂದೂ, ಭದ್ರಾವತಿ ಕಬ್ಬಿಣ ಕಾರ್ಖಾನೆ ಅಭಿವೃದ್ಧಿಗೆ ಸಂಕಾರಂದ ಹೆಚ್ಚು ನೆರವು ಬೇಕೆಂದೂ ಮೈಸೂರು ಕಾಂಗ್ರೆಸಿಗರು ಶೀ ಸಿ ಆರ್ ಬಸಪ್ಪನವರು ಲೋಕಸಭೆಯಲ್ಲಿ ತಿಳಿಸಿದರು .... ಕೇಂದ್ರ ಸಂಕಾರಂ ಕೋಲಾರ ಚಿನ್ನದ ಗಣಿಯನ್ನು ವಹಿಸಿಕೊಳ್ಳುವ ಯೋಜನೆ ಅಕ್ಕೇ ಪಿಸಿ, ಅದರಿಂದ ರಾಜ್ಯದ ಉತ್ಪತ್ತಿ ಕಡಮೆಯಾಗಿ ಅದಂ ಜನರಿಗೆ ಕೆಲಸದೊರೆಯುವುದು ತಪ್ಪುವಂತಾಗುವುದೆಂದು ಮೈಸೂರು ಸ್ವತಂತ್ರಪಕ್ಷದ ಶ್ರೀ ಜೆ ಎ ಇಮಾಮರು ಲೋಕಸಭೆಯಲ್ಲಿ ಹೇಳಿದರು.

★

ಪಿಎಸ್ಪಿ

ಕಟಕ್ 13— ಒರಿಸ್ಸಾ ಜನತಾವಣೆ ಪುಲ್ಲಿ ಪಿಎಸ್ಪಿ ಯಾವ ಪಕ್ಷದೊಂದಿಗೂ ಸೇರುವುದಿಲ್ಲವೆಂದು ಪಕ್ಷದ ಅಧ್ಯಕ್ಷರು ಹೇಳಿದರು.

ಕಾಂಗ್ರೆಸಿಗೆ ಜಯ

ಬೊಂಬಾಯಿ — ಕಾಂಗ್ರೆಸ್ಸಿನ ಶ್ರೀ ವಾಲ್ಚಿಕಾರರು ಬೊಂಬಾಯಿ ಮೇಯರಾಗಿ ಚುನಾಯಿತರಾದರು ; ಸಂಯುಕ್ತ ಮಹಾರಾಷ್ಟ್ರ ಸಮಿತಿಯ ಶೀ ಮೆಲೊಸರು ಪರಾಜಿತರಾದರು.

ಶೇಕಡ 80

ಬೆಂಗಳೂರು— ಮೂರನೆ ಯೋಜನೆಯ ಕಡೆಯೊಳಗೆ ರಾಜ್ಯದ ಶೇಕಡ ೫೦ ಮಕ್ಕಳು ಶಾಲೆಗೆ ಹೋಗುವರೆಂದು ಶುಕ್ರವಾರ ಶಾಸನ ಸಭೆಯಲ್ಲಿ ತಿಳಿಸಲಾಯಿತು.

ಶಾಸನೋಲ್ಲಂಘನೆ

ಕೂಲಂಬೊ 14— ತಮಿಳು ಭಾಷಾ ಹಕ್ಕಿಗಾಗಿ ಚಳವಳಿ ನಡಸುತ್ತಿರುವ ಫೆಡರಲ್ ಪಾರ್ಟಿಯು ಶುಕ್ರವಾರ ಶಾಸನೋಲ್ಲಂಘನೆ ಪ್ರಾರಂಭಿಸಿ ಜಾಫ್ನಾದಲ್ಲಿ ಸರಂಜಾಮಿ ಪೋಸ್ಟಾಫೀಸುಗಳನ್ನು ಸ್ಥಾಪಿಸಿ, ತಮ್ಮದೇ ಆದ ಸ್ಟ್ಯಾಂಪು ಕವರು ಮಾರಾಟ ಪ್ರಾರಂಭಿಸಿದರು !

★

ಹೊಸ ವಿಶ್ವವಿದ್ಯಾನಿಲಯಗಳು

ನವದೆಹಲಿ 13— ಹೊಸ ವಿಶ್ವವಿದ್ಯಾನಿಲಯ ಸ್ಥಾಪನೆ ವಿಚಾರಂಗಳು ರಾಜ್ಯಗಳಿಂದ ಬಂದಿರುವುದಾಗಿಯೂ, ಅವು ಪರೀಕ್ಷಿಸಲಾಗಿದ್ದು ಆ ಬಗ್ಗೆ ಮುಂದಿನ ಯೋಜನೆಯಲ್ಲಿ ವಿಚಾರ ಮಾಡಲಾಗುವುದೆಂದೂ ಲೋಕಸಭೆಯಲ್ಲಿ ತಿಳಿಸಲಾಯಿತು.

ಸೆಪನ್ಸು ವಿಚಾರಣೆಗೆ

ಬೆಂಗಳೂರು— 1960 ನೇ ಆಕ್ಟೋಬರು 27 ರಂದು ಶ್ರೀರಂಗಪಟ್ಟಣದಲ್ಲಿ ಒಂದು ಮನೆಗೆ ನುಗ್ಗಿ, ಅಲ್ಲಿದ್ದ ವಿವಾಹಿತ ಮಹಿಳೆಯ ಮೇಲೆ ಬಲಾತ್ಕಾರವಾಗಿ ಅತ್ಯಾಚಾರ ನಡೆಸಿದ ಪೋಲೀಸು ಕಾನಸ್ಟೆಬಲು ಹುಚ್ಚಗೌಡನನ್ನು ಮ್ಯಾಜಿಸ್ಟ್ರೇಟರು ಪೆಷನ್ಸಿಗೆ ಕಳಿಟ್ಟು ಮಾಡಿದರು.

ರಷ್ಯಾದೆ ವೀರ

ಮಾಸ್ಕೊ 14— ಬಾಹ್ಯಾಕಾಶ ನೌಕೆಯಲ್ಲಿ ಯುಕಸ್ಮಿಯಾಗಿ ಪ್ರಯಾಣ ಮಾಡಿ ಬಂದ ಮೊದಲ ಗಗನಯಾತ್ರಿಗೆ 'ರಷ್ಯಾ ವೀರ' ಪ್ರಶಸ್ತಿ ಲೆನಿನ್ ಆರ್ಡರ್ ಮತ್ತು ಭಂಗಾರದ ಪದಕ ಕೊಟ್ಟು ಗೌರವಿಸಲಾಯಿತು — ಕೃಶ್ಚೇವರು ಆತನ ಐತಿಹಾಸಿಕ ಪ್ರವಾಸಕ್ಕೆ ವೆನುಬೋಪೊ ನಿಲ್ದಾಣಕ್ಕೆ ಒಂದಿದ್ದರು.

ಒಟಾವ 14 — [illegible]
ಚೀನಾಕ್ಕೆ ಸ್ಥಾನ ದೊರೆಯುವ ವಿಚಾರದಲ್ಲಿ ಪ್ರಯತ್ನ ಮುಂದುವರಿಸುವ ಬಗೆಗೆ ತಮ್ಮೊಡನೆ ಬ್ರಿಟನ್ ಪ್ರಧಾನಿ ಮೆಕ್ಮಿಲನರು ಸಮ್ಮತಿಸುವರೆಂದು ಕೆನಡಾ ಪ್ರಧಾನ ಜಾನ್ ಡೆಫರ್‌ಬೇಕರು ಹೇಳಿರುವ .

★★

ಲಿಯೊಪಾಲ್ಡವಿಲೆ 14—ಕಳೆದವಾರ ಡಾರಸಲಾಂಗೆ ಬಂದ ಭಾರತ ಸೈನಿಕರು ಕಾಮಿನಿಯಾ ನಿರ್ವಾಣಕ್ಕೆ ವಿಶ್ವಸಂಸ್ಥೆ ಏರ್ಪಾಡದಲ್ಲಿ ಶಾಂತಿಸಲ್ಪಟ್ಟರು : ಎಲ್ಲ ಭಾರತ ಸೈನಿಕರನ್ನೂ ಲಿಯೊಪಾಲ್ಡವಿಲೆಗೆ ಶಾಂತಿಸಲು ಅಮೇರಿಕಾ ತಿಂಸ್ಕರಿಸಿದ್ದೇ ಕಾರಣವು.

o o

ವಿಶ್ವಸಂಸ್ಥೆ 14— ದಕ್ಷಿಣ ಆಫ್ರಿಕದಲ್ಲಿ ವರ್ಣವಿಭೇದವನ್ನು ಕೊನೆಗಾಣಿಸಲು ಪ್ರತ್ಯೇಕ ಪ್ರಶ್ನೆ ಒಟ್ಟಾಗಿ ಕಾರ್ಯಾಚರಣೆ ಕೈಗೊಳ್ಳುವ ಒಗ್ಗೆ ಪರಾಶೀಲೋಚಿಸಲು ಸದಸ್ಯ ದೇಶಗಳಿಗೆ ಜನರಲ್ ಅಸೆಂಬ್ಲಿಯು ಕರೆಯಿತ್ತಿತು.

o o

ನವದೆಹಲಿ 14— ಕಾಂಗ್ರೆಸ್ಸು ನಿಯಮವನ್ನುಲ್ಲಂಘಿಸಿದ ಅಪಾದನೆಗಾಗಿ 4 ಮಂದಿ ಬೀಹಾರು ಕಾಂಗ್ರೆಸ್ಸಿಗರನ್ನು 1 ವರ್ಷದಿಂದ 2 ವರ್ಷಗಳವರೆಗೆ ಹೊರದೂಡಿರುವರು.

o o

ನವದೆಹಲಿ 14— ಭಾರತದ ಕೈಡಿಟ್ ಮತ್ತು ಇಕ್ವಿಪ್‌ಮೆಂಟು ಕಾರ್ಪೊರೇಷನ್ನಿಗೆ ಅಮೇರಿಕಾ ಡೆವಲಪ್‌ಮೆಂಟು ಸಾಲ ನಿಧಿಯಿಂದ 5 ಮಿಲಿಯ ಡಾಲರುಗಳವರೆಗೆ ಸಾಲ ಕೊಡುವ ಒಪ್ಪಂದವಾಯಿತು.

o o

ಢಾಕಾ 13— ಅಂಬರ ಜರ್ದವಕ್ಕು ಪೂರ್ವ ಪಾಕಿಸ್ತಾನ ಪಣ್ಣು ಮತ್ತು ಗುಡಿ ಕೈಗಾರಿಕೆಗೆ ಉಪಯೋಗಿಸಲಾಗುತ್ತಿದೆ.

[illegible] ಭಾಷೆಗಳು

[illegible]ಗೆ ಉತ್ತೇಜನ ಕೊಡುವ ವಿಚಾರದಲ್ಲಿ ವಿಶ್ವವಿದ್ಯಾ[illegible] ಅಯೋಗವು ಕಪಾಸಾರಿಸುವ ಯೋಜನೆಯ ವಿವರಗಳು [illegible]ಸಲಾಯಿತು.

ಭಾಂಶಕ ಭೂಗವಹಿಸುವುದು

[illegible] 14— ಅಂತಾರಾಷ್ಟ್ರೀಯ ಸಂಗೀತ ಸಮ್ಮೇಳನ ಮತ್ತು [illegible]ಕಿಯೋದಲ್ಲಿ ಇದೇ ಏಪ್ರಿಲ್ 17 ರಿಂದ ಮೇ 6 ರವರಿಗೆ ನಡೆ[illegible]ಲ್ಲಿ ಭಾಗವಹಿಸಲು ಭಾಂಶ ಸಂಕಾರವು ನಿರ್ಣಯಿಸಿದೆ.

ಆಡಳಿತ ಭಾಷೆ

[illegible]ಹಲಿ 14— ಆಡಳಿತ ಭಾಷೆಯ ಬಗ್ಗೆ ಇನ್ನೊಂದು ಆಯೋಗ ನೇಮಿಸುವುದಕ್ಕೆ ಅಗತ್ಯವೇನೂ ಕಂಡುಬಂದಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಅಮೇರಿಕ ಬಂಡವಾಳ

ನವದೆಹಲಿ 13— 1958 ರ ಕೊನೆಯ ವೇಳೆಗೆ ಭಾರತದಲ್ಲಿ ಹೂಡಲಾಗಿದ್ದ ವಿದೇಶೀ ಬಂಡವಾಳದ ಪ್ರಮಾಣದಲ್ಲಿ ಶೇ 10-5 ರಷ್ಟು ಭಾಗ ಅಂದರೆ ಒಟ್ಟು 59-85 ಕೋಟಿ ರೂಗಳು ಅಮೇರಿಕಾ ಸಂಯುಕ್ತ ಸಂಸ್ಥಾನಗಳು ಹೂಡಿದ್ದ ಬಂಡವಾಳ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಕುಷ್ಠರೋಗ

ಭಾರತದಲ್ಲಿ 30 ಲಕ್ಷಕ್ಕೂ ಹೆಚ್ಚು ಮಂದಿ ಕುಷ್ಠರೋಗದಿಂದ ನರಳುತ್ತಿರುವರೆಂದು ಅಂದಾಜು ಮಾಡಲಾಗಿದೆ. ಕೆಲವು ಕಡೆಗಳಲ್ಲಿ ಈ ರೋಗವು ಶೇಖಡಾವಾರು 40 ರಷ್ಟು ಕಂಡುಬರುತ್ತಿದೆ : ಸುಮಾರು 5 ಲಕ್ಷದಷ್ಟು ಮಂದಿಗೆ ಸಾಂಕ್ರಾಮಿಕ ಮಾದರಿಯ ಕುಷ್ಠರೋಗವಿರುವುದು.



Bouncing health can be yours, too...

Capture bouncing health and add new zest to life by taking Vitoferrin.

A modern tonic of vitamins & minerals in a very palatable base of malt extract & honey, Vitoferrin is excellent for both children and adults.

VITOFERRIN

the modern recuperative tonic

TRADE MARK

THE MYSORE INDUSTRIAL & TESTING LABORATORY LTD., BANGALORE-3

Available at all leading Chemists & Druggists of your place

EP.

Our Bangalore Sales Depot address—
71 / 4 Arcot Sreenivasachar St., Bangalore 2.

★ SEE TO-DAY ★

At Woodlands : Glorious 2nd Week

Never before on the Screen— The glories, The Triumphs, the Conquests of the World's mightiest man !

HERCULES UNCHAINED

Steve Reeves as Hercules — — in Eastman Color

See— War of Chariots, Arena of Tigers, Court of Lover, Temptress Lydia, Contest of Giants, Combat of Kings

Help 'The Gorakshana'

Advertise in Goraksana and help the pious cause



"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪಶುಸಂಪತ್ತಿನ ಅಭಿವೃದ್ಧಿ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರ ಏಕೈಕ ಕನ್ನಡ ಪತ್ರಿಕೆ.

ಆಪೆರಾ— 10-4-61 ರಿಂದ

.... ಪ್ರತಿ ಸಂಸಾರವೂ ನೋಡಬೇಕಾದ ಸಾಮಾಜಿಕ ಚಿತ್ರ ....

ಉತ್ತಮಪುತ್ರ ರತ್ನ (ತಮಿಳು)

ಪಾತ್ರ— ಕನ್ನಾಂಬಾ, ಮಾಲಿನಿ, ಪಂಡರಿಬಾಯಿ, ಎಂ ಎಸ್ ರತ್ನಮ್ಮ ವಿ ಕೆ ರಾಮಸ್ವಾಮಿ, ಕುಲದೈವಂ ರಾಜಗೋಪಾಲ್, ಸಹಸ್ರನಾಮಂ, ಬಾಲಾಜಿ

SHAKTI SUDHA

**

A Superb Tonic

Edited, Printed & Published by the Proprietor Dharma Prachara Nirata M. S. KrishnaRao, at the Satyavadi Press Chamarajapuram, Mysore 4.